

ಕೆ.ಜಿ.ಗೂ ಹೆಚ್ಚು ತೂಗುವ ಆಮ್ಲೆಟ್ ಮಾವು ಚಿತ್ರ: ಚಂದ್ರೇಗೌಡ

ಹಾಕಿದ ಬಂಡವಾಳವೂ ಕೈ ಸೇರದ ಸ್ಥಿತಿ ಎಷ್ಟೋ ಸಲ ನಿರ್ಮಾಣವಾಗಿದೆ. ಹವಾಮಾನ ವೈಪರೀತ್ಯದಿಂದಾಗಿ ಎರಡು ವರ್ಷದ ಹಿಂದೆ ಶೇ. 5ರಷ್ಟು ಸಹ ಬೆಳೆ ಬರಲಿಲ್ಲ. ಅತಿಯಾದ ಅಕಾಲಿಕ ಮಳೆಯಿಂದಾಗಿ ಈ ವರ್ಷ ಶೇ 20ರಷ್ಟು ಸಹ ಬೆಳೆ ಇಲ್ಲ. ಮಾವು ಬೆಳೆಯು ಹವಾಮಾನದೊಂದಿಗಿನ ಜೂಜಾಟದ ಬೆಳೆಯಾಗಿದೆ. ಲಾಭಕ್ಕಿಂತ ನಷ್ಟದ ಸಾಧ್ಯತೆಯೇ ಹೆಚ್ಚು ಎಂಬ ಸ್ಥಿತಿ ಇತ್ತೀಚಿನದು. ಹಾಗಾಗಿ, ಬೆಳೆಗಾರರು ಮಾವು ಬೆಳೆಯಿಂದ ವಿಮುಖರಾಗುತ್ತಿದ್ದಾರೆ. ಈ ಭಾಗದಲ್ಲಿ ಭೂಮಿ ಬೆಲೆ ಹೆಚ್ಚುತ್ತಿರುವುದರಿಂದ ಬೆಳೆ ನೆಚ್ಚಿ ಬದುಕಲಾರೆವು ಎಂದು ಬೆಳೆಗಾರರು ತಮ್ಮ ಜಮೀನುಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಜಿಲ್ಲೆಯಲ್ಲಿ ಮಾವು ಪ್ರದೇಶ ತಗ್ಗುತ್ತಿದೆ' ಎಂದು ರೈತ ಆದೀಶ್ ಮತ್ತು ವ್ಯಾಪಾರಿ ನಿಜಾಮುದ್ದೀನ್ ಆತಂಕ ವ್ಯಕ್ತಪಡಿಸಿದರು.

## ಮಾವಿಗೆ ವಿಶೇಷ ಆದ್ಯತೆ

ಕರ್ನಾಟಕದ ಪ್ರಮುಖ ತೋಟಗಾರಿಕೆ ಬೆಳೆಯಾಗಿರುವ ಮಾವು ಬೆಳೆಗೆ ವಿಶೇಷ ಆದ್ಯತೆ ನೀಡಿರುವ ಸರ್ಕಾರ, 2011ರಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ಸ್ಥಾಪಿಸಿದೆ. ಚಿಕ್ಕಬಳ್ಳಾಪುರದಲ್ಲಿ ಕೊಯ್ಲೋತ್ತರ ಮತ್ತು ಕೋಲಾರದಲ್ಲಿ ಕೊಯ್ಲು ಪೂರ್ವ ಮಾವು ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿದೆ. ಮಾವು ಬೇಸಾಯ, ಕೊಯ್ಲೋತ್ತರ ನಿರ್ವಹಣೆ, ಮಾರಾಟ, ರಫ್ತಿಗೆ ಪ್ರೋತ್ಸಾಹಿಸುವ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಬೆಳೆಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಉತ್ತಮ ಕೃಷಿ ಪದ್ಧತಿ ಅಳವಡಿಕೆ ಕುರಿತು ತರಬೇತಿ, ತಂತ್ರಜ್ಞಾನ ಅಳವಡಿಕೆ, ನೇರ ಮಾರುಕಟ್ಟೆ ಕಲ್ಪಿಸಲು ಮತ್ತು ರೈತ ರಫ್ತುದಾರರಾಗಲು ತರಬೇತಿ ನೀಡುತ್ತಾ ಬಂದಿದೆ. ಪ್ರತಿ ವರ್ಷ ಮಾವು ಮೇಳ ಆಯೋಜಿಸಿ ರೈತರಿಂದ ಗ್ರಾಹಕರಿಗೆ ನೇರವಾಗಿ ಹಣ್ಣುಗಳನ್ನು ತಲುಪಿಸುವುದು, ತೋಟಕ್ಕೆ ಗ್ರಾಹಕರನ್ನು ಕರೆದೊಯ್ಯುವುದು, ಆನ್‌ಲೈನ್ ಮೂಲಕವೇ ಬೆಳೆಗಾರರು ಮತ್ತು ಖರೀದಿದಾರರಿಗೆ ಸೇತುವಾಗುವ ಕೆಲಸವನ್ನು ಸಹ ನಿಗಮ ಮಾಡುತ್ತಿದೆ.

## ಮಾವು ಹಣ್ಣಾಗಿಸುವ ಬಗೆ

ಮಾವು ಸವಿಯುವುದಕ್ಕೆ ಮುಂಚೆ ಅವುಗಳನ್ನು ಹೇಗೆ ಹಣ್ಣಾಗಿಸಲಾಗುತ್ತದೆ ಎಂಬುದರ ಅರಿವು ಮುಖ್ಯ. ಮುಂಚೆಲ್ಲಾ ಮಾವಿನ ಕಾಯಿಗಳನ್ನು ಕೊಯ್ಲು ಮಾಡಿದ ಬಳಿಕ ಹಣ್ಣು ಮಾಡಲು ತೋಟದ ಮನೆಗಳಲ್ಲಿ, ಮನೆಗಳ ಅಟ್ಟದಲ್ಲಿ ‘ಅಡಿ’ಗೆ

**71,38,600**
**ಮೆಟ್ರಿಕ್ ಟನ್**
ರಾಜ್ಯದಲ್ಲಿ ಪ್ರತಿ ವರ್ಷದ ಹಣ್ಣುಗಳ ಉತ್ಪಾದನೆ

## ರಾಜ್ಯವಾರು ಮಾವು ತಳಿ

- ಆಂಧ್ರಪ್ರದೇಶ: ಬಂಗನಪಲ್ಲಿ, ಸುವರ್ಣರೇಖಾ, ನೀಲಂ, ತೋತಾಪುರಿ
- ಗುಜರಾತ್: ಕೇಸರ್, ಅಲ್ಫಾನ್ಸೊ, ರಾಜಪುರಿ, ಜಮಾದರ್, ತೋತಾಪುರಿ, ನೀಲಂ, ದಶೆಹರಿ, ಲಾಂಗ್ರಾ
- ಬಿಹಾರ: ಬಾಂಬೆ ಗ್ರೀನ್, ಚೌಸಾ, ದಶೆಹರಿ, ಫಜ್ಲಿ, ಗುಲಾಬ್ಖಾಸ್, ಕಿಶನ್ ಭೋಗ್, ಹಿಮ್ಸಾಗರ್, ಜರ್ದಾಲು, ಲಾಂಗಡಾ
- ಹಿಮಾಚಲ ಪ್ರದೇಶ: ಚೌಸಾ, ದಶೇಹರಿ, ಲಂಗಡಾ
- ಮಧ್ಯಪ್ರದೇಶ: ಅಲ್ಫಾನ್ಸೊ, ಬಾಂಬೆ ಗ್ರೀನ್, ದಶೆಹರಿ, ಫಜ್ಲಿ, ಲಾಂಗ್ರಾ, ನೀಲಂ
- ಕರ್ನಾಟಕ: ಅಲ್ಫಾನ್ಸೊ (ಬಾದಾಮಿ), ತೋತಾಪುರಿ, ಬಂಗನಪಲ್ಲಿ, ಪೈರಿ, ನೀಲಂ, ಮಲಗೋವಾ
- ಮಹಾರಾಷ್ಟ್ರ: ಅಲ್ಫಾನ್ಸೊ, ಕೇಸರ್, ಪೈರಿ
- ಪಂಜಾಬ್: ಚೌಸಾ, ದಶೇಹರಿ, ಮಾಲ್ಡಾ
- ರಾಜಸ್ಥಾನ: ಬಾಂಬೆ ಗ್ರೀನ್, ಚೌಸಾ, ದಶೆಹರಿ, ಲಾಂಗ್ರಾ
- ತಮಿಳುನಾಡು: ಅಲ್ಫಾನ್ಸೊ, ತೋತಾಪುರಿ, ಬಂಗನಪಲ್ಲಿ, ನೀಲಂ
- ಉತ್ತರ ಪ್ರದೇಶ: ಬಾಂಬೆ ಗ್ರೀನ್, ಚೌಸಾ, ದಶೆಹರಿ, ಲಾಂಗ್ರಾ
- ಪಶ್ಚಿಮ ಬಂಗಾಳ: ಫಜ್ಲಿ, ಗುಲಾಬ್ಖಾಸ್, ಹಿಮ್ಸಾಗರ್, ಕಿಶನ್ ಭೋಗ್, ಲಾಂಗ್ರಾ, ಬಾಂಬೆ ಗ್ರೀನ್
- ಹರಿಯಾಣ: ಚೌಸಾ, ದಶೆಹರಿ, ಲಾಂಗ್ರಾ, ಫಜ್ಲಿ



ರಾಮನಗರದ ರಸ್ತೆ ಬದಿ ಮಾರಾಟಕ್ಕಿಟ್ಟಿರುವ ಮಾವಿನ ಹಣ್ಣುಗಳು
ಚಿತ್ರ: ಚಂದ್ರೇಗೌಡ